## ಯೋಜನೆಯ ಉದ್ದೇಶ ಮತ್ತು ಮಹತ್ವ

**ಸಂಶೋಧನೆ ಮಾಡಿದ ಬಗೆ (ರೀತಿ-ವಿಧಾನ):**

2008ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದವರು ಕಿರು ಸಂಶೋಧನೆಗಳಿಗಾಗಿ ಅರ್ಹ ಅಧ್ಯಾಪಕರಿಂದ ಅರ್ಜಿಯನ್ನು ಕರೆದಿದ್ದರು. ಅದರನ್ವಯ ನಿಗದಿತ ನಮೂನೆಯಲ್ಲಿ ಸಂಶೋಧನೆಯ ಉದ್ದೇಶ, ಮಹತ್ವ ವಿವರಿಸಿ ಮನವಿ ಕೊಡಲಾಗಿತ್ತು. 2009ರ ಎಪ್ರಿಲ್ 6ರಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಸಂಶೋಧನಾ ವಿಷಯದ ಪ್ರಾಮುಖ್ಯತೆ ಅರಿತು ಧನ ಸಹಾಯ ಮಂಜೂರು ಮಾಡಿತು. (ಯುಜಿಸಿ ಪತ್ರ- ಅನುಬಂಧ) ಈ ಯೋಜನೆಗೆ ಕಾಲೇಜಿನ ಗ್ರಂಥಾಲಯ ವಿಜ್ಞಾನ ಹಾಗು ಮಾಹಿತಿ ತಂತ್ರಜ್ಞಾನದ ಅಧ್ಯಾಪಕರ ನೆರವನ್ನು ಯೋಜನೆಯ ಸಹ ಸಂಚಾಲಕರಾಗಿ ಪಡೆಯಲಾಯಿತು. ವಿಷಯ ಸಂಗ್ರಹಕಾರ್ಯ ವಿವಿಧ ಮೂಲಗಳಿಂದ ಮಾಡಲಾಯಿತು.

**ಮಾಹಿತಿ ಸಂಗ್ರಹ ವಿಧಾನಗಳು**

1. ಸ್ಥಳೀಯ ವಿಶ್ವವಿದ್ಯಾಲಯ, ಕಾಲೇಜುಗಳ ಗ್ರಂಥಾಲಯಗಳ ಭೇಟ್ಟಿ- ವಿಷಯ ಸಂಗ್ರಹಣೆ
2. ಸ್ವಾತಂತ್ರ್ಯ ಪೂರ್ವದಲ್ಲಿಯ ಹಿರಿಯರಿಂದ ಗ್ರಂಥಾಲಯಗಳ ಕುರಿತಂತೆ ಮಾಹಿತಿ ಸಂಗ್ರಹಣೆ
3. ಪತ್ರಿಕಾ ಪ್ರಕಟಣೆ – ಸಾರ್ವಜನಿಕರಿಂದ, ಮಾಹಿತಿ ಇದ್ದವರಿಂದ ವಿವರಗಳ ಕ್ರೋಢೀಕರಣ (ಪತ್ರಿಕಾ ಪ್ರಕಟಣೆ ವರದಿ ಪ್ರತಿ ಅನುಬಂಧ)
4. 1901–1960 ಅವಧಿಯಲ್ಲಿದ್ದ ಗ್ರಂಥಾಲಯಗಳ, ಗ್ರಂಥ ಪ್ರಕಟಣಾ ಕನ್ನಡ ಸಾಹಿತ್ಯ ಸಂಘಗಳಿಂದ ನಿಗದಿತ ನಮೂನೆಯಲ್ಲಿ ವಿವರಗಳ ಸಂಗ್ರಹ

**(ಪ್ರಶ್ನಾವಳಿಯ ಮಾದರಿ) ಅನುಬಂಧ**

5. ಆಯಾ ಜಿಲ್ಲೆಯ ಗ್ರಂಥಾಲಯಗಳಿಗೆ ಭೇಟ್ಟಿ ಅವುಗಳ ಮಾಹಿತಿ – ಪರಿಶೀಲನೆ-ಕಾರ್ಯ ಚಟುವಟಿಕೆಗಳ ವಿವರಗಳೊಂದಿಗೆ